


ಚಿತ್ರಗಳು : ಸೃಜನ್

ಗೋಪೀನಾಥ ರಾವ್

# ಚಿತ್ರಾನ್ನ

ರಸ್ತೆಬದಿಯಲ್ಲಿ ಅಪ್ಪ ತೂರಾಡುತ್ತ ಬರುತ್ತಿದ್ದ. 'ಮಾಸ್ತರಾ... ನೀವು ಕರೆದು ತಂದದ್ದು ನನ್ನ ಮಗನಾ? ಸರಿ, ಉಪಕಾರವಾಯ್ತು. ಇನ್ನು ನಾನಿದ್ದೇನೆ' ತೊದಲುತ್ತ ನುಡಿದ.

'ಕುಡಿದವನಿಗೆ ಮಗನನ್ನು ಮನೆಗೆ ಕರೆದುಕೊಂಡು ಹೋಗಲಿಕ್ಕಿದೆ ಎನ್ನುವ ನೆನಪು ಹೇಗೆ ಆಯಿತು? ಕೈಯಲ್ಲಿ ಹಣ ಸಿಕ್ಕುವುದೇ ಅಪರೂಪ, ಸಿಕ್ಕಿದರೆ ಅದನ್ನು ಕುಡಿದು ಖಾಲಿ ಮಾಡದೆ ನಿದ್ದೆ ಬರುವುದಿಲ್ಲ ನಿಮಗೆ. ಸರ್ಕಾರಕ್ಕೂ ಅಷ್ಟೆ. ನೀವೇ ದೊಡ್ಡ ಗಿರಾಕಿಗಳು... ನೌಕರರಿಗೆ ವೇತನ ಕೊಡಬೇಕಿದ್ದರೆ ಸಾರಾಯಿ ದುಡ್ಡು ಬರಬೇಕು' ಅಂದರು ಮಾಸ್ತರರು.

'ಛೇ ಅಷ್ಟೇನೂ ಕುಡಿದಿಲ್ಲ ಮಾಸ್ತರಾ... ಲಿಮಿಟಿನಲ್ಲಿದ್ದೇನೆ. ನಿಮ್ಮ ಪರಿಚಯ, ಮಗನ ಗುರುತು ಹಿಡಿಯಲಿಲ್ಲವಾ? ಹೆಂಡತಿ ಮಕ್ಕಳ ನೆನಪು ಇಟ್ಟುಕೊಂಡಿದ್ದೇನೆ. ಹಾಗಾಗಿ ಕುಡಿಯುವುದು ಬಹಳ ಕಡಿಮೆ. ಎಲ್ಲಿಯಾದ್ರೂ ಗೆಳೆಯರು ಸೇರಿ ಪಾರ್ಟಿ ಮಾಡಿದರೆ ಒಮ್ಮೊಮ್ಮೆ. ಪಾರ್ಟಿಯಲ್ಲಿ ಈಗ